ಸೃಷ್ಟಿಸಿದ ಈ ಲೋಕ ಮಿಕ್ಕ ಎಲ್ಲಕ್ಕಿಂತ ನಿಜವಾದುದಾಗಿ ಕಾಣುತಿತ್ತು.

ನಮ್ಮಪ್ಪನ ಸೂಟ್‌ಕೇಸು ದಿಟ್ಟಿಸುತ್ತಾ ಬರವಣಿಗೆಯಲ್ಲಿ ತೊಡಗಿದ್ದಾಗ ನಮ್ಮಪ್ಪ ಕೂಡ ಇಂಥದೇ ಸಂತೋಷ ಕಂಡಿರಬಹುದು, ಅಪ್ಪನ ಬರವಣಿಗೆ ಓದುವ ಮೊದಲೇ ನಿರ್ಣಯ ಮಾಡಬಾರದು ಅಂದುಕೊಂಡೆ. ಎಷ್ಟಂದರೂ ನಾನು ನಮ್ಮಪ್ಪನಿಗೆ ಕೃತಜ್ಞ. ನಮ್ಮಪ್ಪ ಎಂದೂ ದಬ್ಬಾಳಿಕೆಯ, ಆರ್ಡರು ಮಾಡುವ ಶಿಕ್ಷೆ ಕೊಡುವ ಸಾಮಾನ್ಯ ಅಪ್ಪ ಆಗಿರಲೇ ಇಲ್ಲ. ನನ್ನನ್ನು ನನ್ನ ಪಾಡಿಗೆ ಸ್ವತಂತ್ರವಾಗಿ ಬಿಟ್ಟ, ನನಗೆ ತೀರ ಗೌರವ ಕೊಡುತ್ತಿದ್ದ ಅಪ್ಪ ನಮ್ಮಪ್ಪ. ನನ್ನ ಬಾಲ್ಯದ, ಹದಿಹರೆಯದ ಗೆಳೆಯರ ಹಾಗೆ ನನ್ನಲ್ಲಿ ಅಪ್ಪನ ಬಗ್ಗೆ ಭಯವಿರಲಿಲ್ಲ. ನಮ್ಮಪ್ಪ ತನ್ನ ಯೌವನದಲ್ಲಿ ಕನಸು ಕಂಡಿದ್ದ ಹಾಗೆ ನಾನು ಲೇಖಕನಾಗಬೇಕು ಎಂದು ಬಯಸಿದ್ದರು. ಹಾಗಾಗಿ ನನ್ನ ಕಲ್ಪನೆಯನ್ನು ಮಗುವಿನ ಹಾಗೆ ಸ್ವತಂತ್ರವಾಗಿ ನನಗೆ ಬೇಕಾದ ಹಾಗೆ ಬಳಸಿಕೊಳ್ಳಲು ಸಾಧ್ಯವಾಯಿತು ಎಂದು ಎಷ್ಟೋ ಸಾರಿ ಅಂದುಕೊಂಡಿದ್ದೇನೆ. ನಮ್ಮಪ್ಪನನ್ನು ತಾಳ್ಮೆಯಿಂದ ಓದಬೇಕು, ಆ ಹೋಟೆಲ್ ರೂಮುಗಳಲ್ಲಿ ಏನು ಬರೆದರು ಅನ್ನುವುದನ್ನು ಅರಿಯಬೇಕು.

ಇಂಥ ಭರವಸೆಯ ಯೋಚನೆಗಳನ್ನಿಟ್ಟುಕೊಂಡು ಸೂಟ್‌ಕೇಸಿನ ಹತ್ತಿರಕ್ಕೆ ಹೋದೆ. ಅದು ನಮ್ಮಪ್ಪ ಇಟ್ಟಿದ್ದಲ್ಲಿಯೇ ಇನ್ನೂ ಕಾಯುತ್ತ ಕುಳಿತಿತ್ತು. ನನ್ನೆಲ್ಲ ಇಚ್ಛಾಶಕ್ತಿಯನ್ನೂ ಬಳಸಿಕೊಂಡು ಕೆಲವು ಪುಟಗಳ ಹಸ್ತಪ್ರತಿ, ಕೆಲವು ನೋಟ್‌ಬುಕ್ಕುಗಳನ್ನು ಓದಿದೆ. ನಮ್ಮಪ್ಪ ಯಾವುದರ ಬಗ್ಗೆ ಬರೆದಿದ್ದರು? ಪ್ಯಾರಿಸ್ ಹೋಟೆಲಿನ ಕಿಟಕಿಯಿಂದ ಕಂಡ ದೃಶ್ಯ, ಒಂದೆರಡು ಕವಿತೆ, ವಿರೋಧಾಭಾಸದ ಉಕ್ತಿ, ವಿಶ್ಲೇಷಣೆ ಇವು ಜ್ಞಾಪಕಕ್ಕೆ ಬರುತ್ತಿವೆ... ಇದನ್ನು ಬರೆಯುತ್ತಿರುವಾಗ ಇದೇ ಈಗ ರಸ್ತೆ ಅಪಘಾತವನ್ನು ನೋಡಿ ಬಂದವರು ಎಲ್ಲ ಹೇಗಾಯಿತು ಅನ್ನುವುದನ್ನು ಜ್ಞಾಪಿಸಿಕೊಳ್ಳಲು ಹೆಣಗುತ್ತಾರಲ್ಲ, ತೀರ ಎಲ್ಲವನ್ನೂ ಜ್ಞಾಪಿಸಿಕೊಳ್ಳುವುದಕ್ಕೆ ಅಂಜುತ್ತಾರಲ್ಲ, ಹಾಗೆ ಅನ್ನಿಸುತ್ತಿದೆ. ನಾನು ಮಗುವಾಗಿದ್ದಾಗ ನಮ್ಮಪ್ಪ ಮತ್ತೆ ಅಮ್ಮ ಜಗಳದ ಅಂಚಿಗೆ ತಲುಪಿಬಿಡುತ್ತಿದ್ದರು. ಆಗ ತಟ್ಟನೆ ಸುಮ್ಮನಾಗಿ ಸಾವಿನಂಥ ಮೌನ ಕವಿಯುತಿತ್ತು, ನಮ್ಮಪ್ಪ ಹೋಗಿ ರೇಡಿಯೋ ಹಾಕುತ್ತಿದ್ದರು. ಮೂಡು ಬದಲಾಗಿ ನಾವು ಎಲ್ಲವನ್ನೂ ಬೇಗ ಮರೆಯಲು ಸಹಾಯವಾಗುತ್ತಿತ್ತು.

ಆ ಸಂಗೀತದ ಹಾಗೆಯೇ ಮೂಡು ಬದಲಾಯಿಸುವಂಥ ಸವಿಯಾದ ಎರಡು ಮಾತು ಹೇಳುತ್ತೇನೆ. ನಿಮಗೆಲ್ಲ ಗೊತ್ತಿದೆ – ಲೇಖಕರನ್ನೆಲ್ಲ ಎಲ್ಲರೂ ಆಗಾಗ ಕೇಳುವ ಪ್ರಿಯವಾದ ಪ್ರಶ್ನೆ ಒಂದಿದೆ. ನೀವು ಯಾಕೆ ಬರೆಯುತ್ತೀರಿ ಅನ್ನುವ ಪ್ರಶ್ನೆ ಅದು. ನಾನು ಯಾಕೆ ಬರೆಯುತ್ತೇನೆಂದರೆ ಬರೆಯುವುದು ನನ್ನೊಳಗಿನ ಅಗತ್ಯ! ಯಾಕೆ ಬರೆಯುತ್ತೇನೆಂದರೆ ಎಲ್ಲರ ಹಾಗೆ ನಾರ್ಮಲ್ ಆಗಿ ಕೆಲಸ ಮಾಡಲಾರೆ. ಯಾಕೆ ಬರೆಯುತ್ತೇನೆಂದರೆ ನಾನು ಬರೆಯುವಂಥ ಪುಸ್ತಕಗಳನ್ನು ಓದುವುದು ನನಗಿಷ್ಟ. ಯಾಕೆ ಬರೆಯುತ್ತೇನೆಂದರೆ ನನಗೆ ನಿಮ್ಮೆಲ್ಲರ ಬಗ್ಗೆ, ಪ್ರತಿಯೊಬ್ಬರ ಬಗ್ಗೆ ಕೋಪವಿದೆ. ಯಾಕೆ ಬರೆಯುತ್ತೇನೆಂದರೆ ರೂಮಿನಲ್ಲಿ ಇಡೀ ದಿನ ಕೂತು ಬರೆಯುವುದು ನನಗೆ ಇಷ್ಟ. ಯಾಕೆ ಬರೆಯುತ್ತೇನೆಂದರೆ ನಿಜವಾದ ಬದುಕನ್ನು ಬದಲಾಯಿಸುವ ಮೂಲಕವಷ್ಟೇ ನಾನು ಬದುಕಿನಲ್ಲಿ ಪಾಲ್ಗೊಳ್ಳಬಹುದು. ಯಾಕೆ ಬರೆಯುತ್ತೇನೆಂದರೆ ಇಸ್ತಾಂಬುಲ್‌ನಲ್ಲಿ, ಟರ್ಕಿಯಲ್ಲಿ ನಾವು ಎಂಥ ಬಾಳು ಬಾಳಿದೆವು, ಹೇಗೆ ಬದುಕುತ್ತಿದ್ದೇವೆ ಅನ್ನುದನ್ನು ಮಿಕ್ಕವರು, ನಾವೆಲ್ಲರೂ, ಇಡೀ ಜಗತ್ತು ತಿಳಿಯಬೇಕೆಂದು ಬರೆಯುತ್ತೇನೆ. ಯಾಕೆ ಬರೆಯುತ್ತೇನೆಂದರೆ ಹಾಳೆ, ಪೆನ್ನು, ಇಂಕಿನ ವಾಸನೆ ನನಗೆ ಇಷ್ಟ. ಯಾಕೆ ಬರೆಯುತ್ತೇನೆಂದರೆ ಮಿಕ್ಕ ಯಾವುದೇ ಸಂಗತಿಗಿಂತ ಸಾಹಿತ್ಯದಲ್ಲಿ ನನಗೆ ನಂಬಿಕೆ ಇದೆ, ಕಾದಂಬರಿಯ ಕಲೆಯಲ್ಲಿ ನಂಬಿಕೆ ಇದೆ. ಯಾಕೆ